ಉಳಿದಂತೆ 69 ಕ್ಷೇತ್ರಗಳ ಸಮಿತಿ ರಚಿಸಲು ಪರಿಶೀಲಿಸಲಾಗುತ್ತಿದ್ದು, ಮಿಕ್ಕ 50 ಕ್ಷೇತ್ರಗಳಿಗೆ ಸಮಿತಿ ರಚಿಸಲು ಪ್ರಸ್ತಾವನೆಗಳು ಬಂದ ನಂತರ, ಪರಿಶೀಲಿಸಲಾಗುವುದು

ಆ) ಪ್ರಶ್ನೆ 'ಅ' ರಲ್ಲಿ ಉತ್ತರ ನೀಡಲಾಗಿದೆ

ಇ) ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ

699 (722) ಶ್ರೀ ನರಸಿಂಹಸ್ವಾಮಿ ಜೆ (ದೊಡ್ಡಬಳ್ಳಾಪುರ) – ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಆರಾಧನಾ ಸಮಿತಿಗಳನ್ನು ರಚಿಸದೆ ಅನೇಕ ಭಕ್ತಾದಿಗಳಿಗೆ ಕೊಟ್ಟಿರುವ ಆಶ್ವಾಸನೆಗಳನ್ನು ಪೂರೈಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಬಂದಿದ್ದಲ್ಲಿ, ಸಮಿತಿಗಳ ರಚನೆಗೆ ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಒಟ್ಟು 224 ವಿಧಾನಸಭಾ ಕ್ಷೇತ್ರಗಳಲ್ಲಿ ಈವರೆವಿಗೆ 105 ವಿಧಾನಸಭಾ ಕ್ಷೇತ್ರಗಳ ಆರಾಧನಾ ಸಮಿತಿಗಳನ್ನು ರಚಿಸಲಾಗುತ್ತಿದೆ

ಆ) 'ಈಗಾಗಲೇ 105 ವಿಧಾನ ಸಭಾ ಕ್ಷೇತ್ರಗಳ ಆರಾಧನಾ ಸಮಿತಿ ರಚಿಸಿದ್ದು, 69 ಕ್ಷೇತ್ರಗಳ ಸಮಿತಿಗಳನ್ನು ರಚಿಸಲು ಪರಿಶೀಲಿಸಲಾಗುತ್ತಿದೆ ಉಳಿದ 50 ಕ್ಷೇತ್ರಗಳ ನಮಿತಿ ರಚಿಸಲು ಪ್ರಸ್ತಾವನೆ ನಿರೀಕ್ಷಿಸಲಾಗುತ್ತಿದೆ

700 (923) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರು ಉಪಯೋಗಿಸುವ ಸೀಮೆಎಣ್ಣೆ ಪಂಪ್‌ಸೆಟ್‌ಗಳಿಗೆ ಸಬ್ಸಿಡಿ ದರದಲ್ಲಿ ಸೀಮೆಎಣ್ಣೆ ಒದಗಿಸಿಕೊಡುವ ಕಾರ್ಯಕ್ರಮ ಪ್ರಸ್ತುತ ಜಾರಿಯಲ್ಲಿದೆಯೇ ,

ಆ) ಇಲ್ಲವಾದಲ್ಲಿ, ಸ್ಥಗಿತಗೊಳಿಸಲು ಕಾರಣವೇನು ,

ಇ) ವಿದ್ಯುತ್ ಕಡಿತ ಮತ್ತು ಅಭಾವ ಮತ್ತಿತರ ಕಾರಣಗಳಿಂದಾಗಿ ಕೃಷಿ ಕಾರ್ಯಚಟುವಟಿಕೆಗಳಿಗೆ ಸಹಾಯವಾಗುವಂತೆ ಸೀಮೆಎಣ್ಣೆ ಪಂಪ್‌ಸೆಟ್‌ಗಳನ್ನು